**ಕುವೈತ್‌ನ ಗೌರವಾನ್ವಿತ ಅಮೀರ್ ಅವರ ಗೌರವ ಅತಿಥಿಯಾಗಿ ಅರೇಬಿಯನ್ ಗಲ್ಫ್ ಕಪ್‌ನಲ್ಲಿ ಭಾಗವಹಿಸಿದ ಪ್ರಧಾನಮಂತ್ರಿ**

ಡಿಸೆಂಬರ್ 21, 2024

ಕುವೈತ್‌ನ ಅಮೀರ್ ಆದ ಗೌರವಾನ್ವಿತ ಶೇಖ್ ಮೆಶಾಲ್ ಅಲ್-ಅಹ್ಮದ್ ಅಲ್-ಜಾಬರ್ ಅಲ್-ಸಬಾಹ್ ಅವರ ಆಹ್ವಾನದ ಮೇರೆಗೆ, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಕುವೈತ್‌ನಲ್ಲಿ ನಡೆದ 26 ನೇ ಅರೇಬಿಯನ್ ಗಲ್ಫ್ ಕಪ್‌ನ ಉದ್ಘಾಟನಾ ಸಮಾರಂಭದಲ್ಲಿ 'ಗೌರವ ಅತಿಥಿ'ಯಾಗಿ ಭಾಗವಹಿಸಿದರು. ಪ್ರಧಾನಮಂತ್ರಿಯವರು ಭವ್ಯ ಉದ್ಘಾಟನಾ ಸಮಾರಂಭಕ್ಕೆ ಸಾಕ್ಷಿಯಾಗಿ ಗೌರವಾನ್ವಿತ ಅಮೀರ್, ಗೌರವಾನ್ವಿತ ಕ್ರೌನ್ ಪ್ರಿನ್ಸ್ ಮತ್ತು ಗೌರವಾನ್ವಿತ ಕುವೈತ್ ಪ್ರಧಾನಮಂತ್ರಿಯವರೊಂದಿಗೆ ಸೇರಿಕೊಂಡರು. ಈ ಕಾರ್ಯಕ್ರಮವು ಕುವೈತ್ ನೇತೃತ್ವದೊಂದಿಗೆ ಪ್ರಧಾನ ಮಂತ್ರಿಗಳ ಅನೌಪಚಾರಿಕ ಸಂವಹನಕ್ಕೆ ಕೂಡ ಅವಕಾಶವನ್ನು ಒದಗಿಸಿತು.

2. ಕುವೈತ್ GCC ರಾಷ್ಟ್ರಗಳು, ಇರಾಕ್ ಮತ್ತು ಯೆಮನ್ ಸೇರಿದಂತೆ ಎಂಟು ದೇಶಗಳಿಗೆ ದ್ವಿವಾರ್ಷಿಕವಾಗಿ ನಡೆಯುವ ಅರೇಬಿಯನ್ ಗಲ್ಫ್ ಕಪ್ ಅನ್ನು ಆಯೋಜಿಸುತ್ತಿದೆ. ಈ ಫುಟ್ಬಾಲ್ ಟೂರ್ನಮೆಂಟ್ ಈ ಪ್ರದೇಶದ ಅತ್ಯಂತ ಪ್ರಮುಖ ಕ್ರೀಡಾ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಭಾಗವಹಿಸುವ ದೇಶಗಳಲ್ಲಿ ಕುವೈತ್ ಗರಿಷ್ಠ ಬಾರಿ ಟೂರ್ನಮೆಂಟ್ ಗೆದ್ದಿದೆ. ಭಾಗವಹಿಸುವ ಎಲ್ಲಾ ದೇಶಗಳಿಗೆ ಪ್ರಧಾನ ಮಂತ್ರಿಗಳು ತಮ್ಮ ಶುಭಾಶಯಗಳನ್ನು ಹೇಳಿದರು.

ಕುವೈತ್ ಸಿಟಿ

ಡಿಸೆಂಬರ್ 21, 2024